Akashvani: Bangalore
National Bulletin In Kannada
16.01.2026: 7.35AM
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

16.01.2026: 7.35AM

********

ಮುಖ್ಯಾಂಶಗಳು :

1. ಸ್ಟಾರ್ಟ್‌ಅಪ್ ಇಂಡಿಯಾ ಉಪಕ್ರಮಕ್ಕೆ ಹತ್ತು ವರ್ಷ; ನವದೆಹಲಿಯ ಕಾರ್ಯಕ್ರಮದಲ್ಲಿಂದು ಪ್ರಧಾನಿ ನರೇಂದ್ರ ಮೋದಿ ಭಾಗಿ
2. ಮೀನುಗಾರಿಕೆ, ಜಲಚರ ಸಾಕಣೆ ಕ್ಷೇತ್ರಗಳಲ್ಲಿ ಸಹಯೋಗಕ್ಕಾಗಿ ಜಂಟಿ ಸಚಿವ ಮಟ್ಟದ ಘೋಷಣಾ ಪತ್ರಕ್ಕೆ ಭಾರತ - ಇಸ್ರೇಲ್ ಸಹಿ
3. ನವದೆಹಲಿಯಲ್ಲಿಂದು ೩ನೇ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಚಾಲನೆ
4. ೧೯ ವರ್ಷದೊಳಗಿನ ಪುರುಷರ ಕ್ರಿಕೆಟ್ ವಿಶ್ವಕಪ್; ಅಮೆರಿಕ ವಿರುದ್ಧ ಭಾರತಕ್ಕೆ ೬ ವಿಕೆಟ್ ಜಯ

*********

ನವದೆಹಲಿಯ ಭಾರತ್ ಮಂಟಪದಲ್ಲಿಂದು ನಡೆಯಲಿರುವ ಸ್ಟಾರ್ಟ್‌ಅಪ್ ಇಂಡಿಯಾ ಉಪಕ್ರಮ ೧೦ ವರ್ಷಗಳನ್ನು ಪೂರೈಸುತ್ತಿರುವ ಸಂದರ್ಭದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಗವಹಿಸಲಿದ್ದಾರೆ. ಈ ವೇಳೆ ಪ್ರಧಾನಿ, ಭಾರತದ ನವೋದ್ಯಮ ಪರಿಸರ ವ್ಯವಸ್ಥೆಯ ಸದಸ್ಯರೊಂದಿಗೆ ಸಂವಾದ ನಡೆಸಲಿದ್ದಾರೆ. ಆಯ್ದ ನವೋದ್ಯಮ ಪ್ರತಿನಿಧಿಗಳು ತಮ್ಮ ಉದ್ಯಮಶೀಲ ಪoiiಣದ ಒಳನೋಟಗಳನ್ನು ಹಂಚಿಕೊಳ್ಳಲಿದ್ದಾರೆ. ಸ್ಟಾರ್ಟ್‌ಅಪ್ ಇಂಡಿಯಾವನ್ನು ೨೦೧೬ರ ಜನವರಿ ೧೬ ರಂದು ಪ್ರಧಾನಿ ನರೇಂದ್ರ ಮೋದಿ ಅವರು ನಾವೀನ್ಯತೆಯನ್ನು ಪೋಷಿಸಲು, ಉದ್ಯಮಶೀಲತೆಯನ್ನು ಉತ್ತೇಜಿಸಲು ಮತ್ತು ಹೂಡಿಕೆ ಆಧಾರಿತ ಬೆಳವಣಿಗೆಯನ್ನು ಸಕ್ರಿಯಗೊಳಿಸಲು ಪರಿವರ್ತಕ ರಾಷ್ಟ್ರೀಯ ಕಾರ್ಯಕ್ರಮವಾಗಿ ಪ್ರಾರಂಭಿಸಿದರು. ಭಾರತವನ್ನು ಉದ್ಯೋಗಾಕಾಂಕ್ಷಿಗಳ ಬದಲು ಉದ್ಯೋಗ ಸೃಷ್ಟಿಕರ್ತರ ರಾಷ್ಟ್ರವನ್ನಾಗಿ ಮಾಡುವುದು ಈ

ಉಪಕ್ರಮದ ಉದ್ದೇಶವಾಗಿದೆ. ಕಳೆದ ದಶಕದಲ್ಲಿ, ಸ್ಟಾರ್ಟ್‌ಅಪ್ ಇಂಡಿಯಾ ಭಾರತದ ಆರ್ಥಿಕ ಮತ್ತು ನಾವೀನ್ಯತೆ ವ್ಯವಸ್ಥೆಯ ಮೂಲಾಧಾರವಾಗಿ ಹೊರಹೊಮ್ಮಿದೆ. ಇದು ಸಾಂಸ್ಥಿಕ ಕಾರ್ಯವಿಧಾನಗಳನ್ನು ಬಲಪಡಿಸಿದೆ, ಬಂಡವಾಳ ಮತ್ತು ಮಾರ್ಗದರ್ಶನಕ್ಕೆ ಪ್ರವೇಶವನ್ನು ವಿಸ್ತರಿಸಿದೆ ಹಾಗೂ ವಲಯಗಳು ಮತ್ತು ಭೌಗೋಳಿಕವಾಗಿ ಸ್ಟಾರ್ಟ್‌ಅಪ್‌ಗಳು ಬೆಳೆಯಲು ಮತ್ತು ಅಳೆಯಲು ಅನುವು ಮಾಡಿಕೊಡುವ ವಾತಾವರಣವನ್ನು ಬೆಳೆಸಿದೆ. ಈ ಅವಧಿಯಲ್ಲಿ ಭಾರತದ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯು ಅಭೂತಪೂರ್ವ ವಿಸ್ತರಣೆಗೆ ಸಾಕ್ಷಿಯಾಗಿದೆ. ದೇಶಾದ್ಯಂತ ಎರಡು ಲಕ್ಷಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳು ಗುರುತಿಸಲ್ಪಟ್ಟಿವೆ. ಈ ಉದ್ಯಮಗಳು ಉದ್ಯೋಗ ಸೃಷ್ಟಿ, ನಾವೀನ್ಯತೆ-ನೇತೃತ್ವದ ಆರ್ಥಿಕ ಬೆಳವಣಿಗೆ ಮತ್ತು ವೈವಿಧ್ಯಮಯ ವಲಯಗಳಲ್ಲಿ ದೇಶೀಯ ಮೌಲ್ಯ ಸರಪಳಿಗಳನ್ನು ಬಲಪಡಿಸುವ ಗಮನಾರ್ಹ ಚಾಲಕ ಶಕ್ತಿಗಳಾಗಿವೆ. ೨೦೩೦ರ ವೇಳೆಗೆ ಭಾರತವು ೭.೩ ಟ್ರಿಲಿಯನ್ ಡಾಲರ್ ಆರ್ಥಿಕತೆಯತ್ತ ಮುನ್ನಡೆಯುತ್ತಿರುವಾಗ ಮತ್ತು ೨೦೪೭ರ ವಿಕಸಿತ ಭಾರತದ ವಿಶಾಲ ದೃಷ್ಟಿಕೋನದೊಂದಿಗೆ, ನವೋದ್ಯಮಗಳು ದೇಶದ ಅಭಿವೃದ್ಧಿ ಪಥದ ಕೇಂದ್ರಬಿಂದುವಾಗಲು ಸಜ್ಜಾಗಿವೆ,

*********

ಮೀನುಗಾರಿಕೆ ಮತ್ತು ಜಲಚರ ಸಾಕಣೆ ಕ್ಷೇತ್ರಗಳಲ್ಲಿ ಸಹಯೋಗವನ್ನು ಬಲಪಡಿಸುವ ಉದ್ದೇಶದಿಂದ ಭಾರತ ಮತ್ತು ಇಸ್ರೇಲ್ ಜಂಟಿ ಸಚಿವ ಮಟ್ಟದ ಘೋಷಣಾ ಪತ್ರಕ್ಕೆ ಸಹಿ ಹಾಕಿವೆ. ಇಸ್ರೇಲ್‌ನಲ್ಲಿ ನಡೆದ ನೀಲಿ ಆಹಾರ ಭದ್ರತೆ, ಸಿ ದಿ ಫ್ಯೂಚರ್ ೨೦೨೬ರ ಕುರಿತ ಎರಡನೇ ಜಾಗತಿಕ ಶೃಂಗಸಭೆಯ ಸಂದರ್ಭದಲ್ಲಿ ಈ ಘೋಷಣಾ ಪತ್ರಕ್ಕೆ ಸಹಿ ಹಾಕಲಾಯಿತು. ಮುಂದುವರಿದ ಜಲಚರ ಸಾಕಣೆ ತಂತ್ರಜ್ಞಾನಗಳು, ಜವಾಬ್ದಾರಿಯುತ ಮೀನುಗಾರಿಕೆ ಅಭ್ಯಾಸಗಳು ಮತ್ತು ಸಾಮರ್ಥ್ಯ ವೃದ್ಧಿಯಲ್ಲಿ ಜಂಟಿ ಸಂಶೋಧನೆ ಮತ್ತು ಅಭಿವೃದ್ಧಿಯ ಮೇಲೆ ಇದು ಕೇಂದ್ರೀಕರಿಸುತ್ತದೆ ಎಂದು ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯ ತಿಳಿಸಿದೆ.

*********

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ನವದೆಹಲಿಯಲ್ಲಿ ೩ನೇ ಅಂತಾರಾಷ್ಟ್ರೀಯ ಗಾಳಿಪಟ ಉತ್ಸವವನ್ನು ಉದ್ಘಾಟಿಸಲಿದ್ದಾರೆ. ಈ ಕಾರ್ಯಕ್ರಮವು ಬಾನ್ಸೆರಾ ಉದ್ಯಾನವನದ

ಹುಲ್ಲುಗಾವಲಿನಲ್ಲಿ ನಡೆಯಲಿದೆ. ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಕಾರ್ಯಕ್ರಮದಲ್ಲಿ ಗೌರವಾನ್ವಿತ ಅತಿಥಿಯಾಗಿ ಭಾಗವಹಿಸಲಿದ್ದಾರೆ. ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಕೂಡ ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಸಾರ್ವಜನಿಕ ಭಾಗವಹಿಸುವಿಕೆಯನ್ನು ಉತ್ತೇಜಿಸುವುದು ಈ ಕಾರ್ಯಕ್ರಮದ ಗುರಿಯಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಗಾಳಿಪಟ ಉತ್ಸವವನ್ನು ವೀಕ್ಷಿಸುವ ನಿರೀಕ್ಷೆಯಿದೆ.

*********

೨೦೧೪ರಲ್ಲಿ ೨೪೯ ಗಿಗಾವ್ಯಾಟ್‌ನಿಂದ ೨೦೨೫ರಲ್ಲಿ ೫೦೦ ಗಿಗಾವ್ಯಾಟ್‌ಗಿಂತ ಹೆಚ್ಚಿನ ಪ್ರಮಾಣಕ್ಕೆ ಸ್ಥಾಪಿತ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಭಾರತ ದ್ವಿಗುಣಗೊಳಿಸಿಕೊಂಡಿದೆ ಎಂದು ಕೇಂದ್ರ ಇಂಧನ ಸಚಿವ ಮನೋಹರ ಲಾಲ್ ಹೇಳಿದ್ದಾರೆ. ನವದೆಹಲಿಯಲ್ಲಿ ಭಾರತ ವಿದ್ಯುತ್ ಶೃಂಗಸಭೆ - ೨೦೨೬ರ ಪೂರ್ವಭಾವಿ ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ವಿಶ್ವಸಾರ್ಹತೆ, ಪ್ರವೇಶ ಸಾಧ್ಯತೆ ಮತ್ತು ಸ್ಥಿತಿ ಸ್ಥಾಪಕತ್ವ ಆಧಾರಿತ ಇಂಧನ ಸಮೃದ್ಧಿಯ ಹೊಸ ಯುಗವನ್ನು ಭಾರತವು ಪ್ರವೇಶಿಸಿದೆ. ಈಗ ಭಾರತ, ವಿಶ್ವದ ೩ನೇ ಅತಿದೊಡ್ಡ ಉತ್ಪಾದಕ ಹಾಗೂ ಬಳಕೆದಾರ ರಾಷ್ಟ್ರವಾಗಿದೆ ಎಂದರು. ಭಾರತ್ ವಿದ್ಯುತ್ ಶೃಂಗಸಭೆ - ೨೦೨೬ ನವದೆಹಲಿಯ ಯಶೋಭೂಮಿಯಲ್ಲಿ ಮಾರ್ಚ್ ೧೯ ರಿಂದ ೨೨ರ ವರೆಗೆ ನಡೆಯಲಿದೆ ಎಂದು ತಿಳಿಸಿದರು.

*********

ಜಾಗತಿಕ ಆರ್ಥಿಕತೆಗೆ ಭಾರತ ಬೆಳವಣಿಗೆಯ ಪ್ರಮುಖ ಚಾಲಕಶಕ್ತಿಯಾಗಿದೆ ಎಂದು ಅಂತಾರಾಷ್ಟ್ರೀಯ ಹಣಕಾಸು ನಿಧಿ - ಐಎಂಎಫ್ ತಿಳಿಸಿದೆ. ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿರುವ ಐಎಂಎಫ್‌ನ ಸಂವಹನ ವಿಭಾಗದ ನಿರ್ದೇಶಕಿ ಜೂಲಿ ಕೊಜ್ಯಾಕ್, ೩ನೇ ತ್ರೈಮಾಸಿಕದಲ್ಲಿ ಭಾರತದ ಆರ್ಥಿಕ ಬೆಳವಣಿಗೆ ನಿರೀಕ್ಷೆಗಿಂತ ಬಲವಾಗಿದೆ ಹಾಗೂ ದೃಢವಾಗಿ ಮುಂದುವರಿದಿದೆ. ಅದು ಹೆಚ್ಚಾಗಿ ಬಲವಾದ ದೇಶೀಯ ಬಳಕೆಯಿಂದ ಮುನ್ನಡೆಸಲ್ಪಟ್ಟಿದೆ ಎಂದರು.

ಈ ಮೊದಲು ಐಎಂಎಫ್, ೨೦೨೫-೨೬ರ ಹಣಕಾಸು ವರ್ಷಕ್ಕೆ ಭಾರತದ ಬೆಳವಣಿಗೆ ದರ ಶೇಕಡ ೬.೬ರಷ್ಟು ಇರುವುದಾಗಿ ಅಂದಾಜಿಸಿತ್ತು. ನಿರೀಕ್ಷೆಗಿಂತ ಉತ್ತಮವಾದ ಇತ್ತೀಚಿನ ಬೆಳವಣಿಗೆ

ಭಾರತದ ಅಂದಾಜನ್ನು ಸಕಾರಾತ್ಮಕವಾಗಿ ಪರಿಷ್ಕರಿಸುವ ಹೆಚ್ಚಿನ ಸಾಧ್ಯತೆ ಇದೆ ಎಂದು ಅವರು ತಿಳಿಸಿದ್ದಾರೆ. ಪರಿಷ್ಕೃತ ಅಂದಾಜುಗಳನ್ನು ಐಎಂಎಫ್‌ನ ವರ್ಲ್ಡ್ ಎಕನಾಮಿಕ್ ಔಟ್‌ಲುಕ್‌ನಲ್ಲಿ ಮುಂದಿನ ವಾರ ಬಿಡುಗಡೆ ಮಾಡಲಾಗುವುದು. ಜಾಗತಿಕ ಅನಿಶ್ಚಿತತೆಯ ನಡುವೆ ಜಾಗತಿಕ ಆರ್ಥಿಕ ಬೆಳವಣಿಗೆಯನ್ನು ಬೆಂಬಲಿಸುವಲ್ಲಿ ಭಾರತದ ಪ್ರಮುಖ ಪಾತ್ರವನ್ನು ಇದು ಸೂಚಿಸುತ್ತದೆ.

*********

ಇಸ್ರೇಲ್‌ನಲ್ಲಿನ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅಲ್ಲಿಗೆ ಅನಿವಾರ್ಯವಿಲ್ಲದಿದ್ದರೆ ಪ್ರಯಾಣ ಕೈಗೊಳ್ಳದಂತೆ ಟೆಲ್ ಅವೀವ್‌ನಲ್ಲಿರುವ ಭಾರತದ ರಾಯಭಾರ ಕಚೇರಿಯು ಭಾರತೀಯ ಪ್ರಜೆಗಳಿಗೆ ಸೂಚಿಸಿದೆ. ಪ್ರಸ್ತುತ ಇಸ್ರೇಲ್‌ನಲ್ಲಿರುವ ಎಲ್ಲಾ ಭಾರತೀಯ ಪ್ರಜೆಗಳು ಜಾಗರೂಕರಾಗಿರಲು ಮತ್ತು ಇಸ್ರೇಲಿ ಅಧಿಕಾರಿಗಳು ಮತ್ತು ಹೋಮ್ ಫ್ರಂಟ್ ಕಮಾಂಡ್ ಹೊರಡಿಸಿದ ಸುರಕ್ಷತಾ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಿದೆ. ಯಾವುದೇ ತುರ್ತು ಸಂದರ್ಭದಲ್ಲಿ, ಭಾರತೀಯ ಪ್ರಜೆಗಳು ಭಾರತೀಯ ರಾಯಭಾರ ಕಚೇರಿಯ ಸಹಾಯವಾಣಿ ಸಂಖ್ಯೆಗಳಾದ +೯೭೨-೫೪-೭೫೨೦೭೧೧ ಮತ್ತು +೯೭೨-೫೪-೩೨೭೮೩೯೨ಕ್ಕೆ ಸಂಪರ್ಕಿಸಬಹುದು ಅಥವಾ ಛಿoಟಿs೧.ಣeಟಚಿviv@meಚಿ.gov.iಟಿ ಗೆ ಇ-ಮೇಲ್ ಮಾಡಬಹುದು.

*********

ಗೋವಾ, ಲಕ್ಷದ್ವೀಪ, ರಾಜಸ್ಥಾನ, ಪುದುಚೇರಿ ಮತ್ತು ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ - ಎಸ್‌ಐಆರ್ ವೇಳಾಪಟ್ಟಿಯನ್ನು ಚುನಾವಣಾ ಆಯೋಗವು ಇದೇ ೧೯ ರವರೆಗೆ ವಿಸ್ತರಿಸಿದೆ. ಇದರೊಂದಿಗೆ, ಮತದಾರರು ಈ ತಿಂಗಳ ೧೯ ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ.

*********

ಮಹಾರಾಷ್ಟ್ರದಾದ್ಯಂತ ೨೯ ಪುರಸಭೆಗಳ ಮತ ಎಣಿಕೆ ಇಂದು ಬೆಳಿಗ್ಗೆ ೧೦ ಗಂಟೆಗೆ ಆರಂಭವಾಗಲಿದ್ದು, ನಿನ್ನೆ ಮತದಾನ ನಡೆಯಿತು. ಮರಾಠವಾಡ ಪ್ರದೇಶದ ಐದು ಪುರಸಭೆಗಳಲ್ಲಿ, ಛತ್ರಪತಿ ಸಂಭಾಜಿನಗರದಲ್ಲಿ ಶೇಕಡ ೫೯.೮೨ ರಷ್ಟು, ಜಲ್ನಾದಲ್ಲಿ ಶೇಕಡ ೬೧.೧೬ರಷ್ಟು.

ಲಾತೂರ್‌ನಲ್ಲಿ ಶೇಕಡ ೬೦.೦೮ ರಷ್ಟು, ಪರ್ಭಾನಿಯಲ್ಲಿ ಶೇಕಡ ೫೫.೫೯ ರಷ್ಟು ಮತ್ತು ನಾಂದೇಡ್‌ನಲ್ಲಿ ಶೇಕಡ ೬೧.೩೭ ರಷ್ಟು ಮತದಾನವಾಗಿದೆ. ಈ ಮಧ್ಯೆ, ಛತ್ರಪತಿ ಸಂಭಾಜಿನಗರದಲ್ಲಿ, ಸಿಟಿ ಚೌಕ್ ಪೊಲೀಸರು ನಕಲಿ ಮತದಾನಕ್ಕೆ ಯತ್ನಿಸಿದ ಆರೋಪದ ಮೇಲೆ ಎಂಟು ಮಹಿಳೆಯರನ್ನು ಬಂಧಿಸಿದ್ದಾರೆ.

*********

ಪಶ್ಚಿಮ ಬಂಗಾಳದಲ್ಲಿ ಇದೇ ೨೩ರಂದು ನಡೆಯಲಿರುವ ಜೆಇಇ ಮೇನ್ಸ್ - ೨೦೨೬ ಸೆಷನ್ - ೧ರ ಪರೀಕ್ಷೆಗೆ ಹಾಜರಾಗಲಿರುವ ಎಲ್ಲಾ ಅಭ್ಯರ್ಥಿಗಳಿಗೆ ಮತ್ತೊಂದು ಪರೀಕ್ಷೆ ದಿನವನ್ನು ನಿಗದಿಪಡಿಸಲು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನಿರ್ಧರಿಸಿದೆ. ಈ ತಿಂಗಳ ೨೩ರಂದು ರಾಜ್ಯದಲ್ಲಿ ಸರಸ್ವತಿ ಪೂಜಾ ಆಚರಣೆಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

*********

ಜಿಂಬಾಬ್ವೆಯ ಬುಲವಾಯೊದಲ್ಲಿ ನಿನ್ನೆ ನಡೆದ ೨೦೨೬ರ ಐಸಿಸಿ ಪುರುಷರ ೧೯ ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್‌ನಲ್ಲಿ, ಪಂದ್ಯಾವಳಿಯ ಮೊದಲ ಪಂದ್ಯದಲ್ಲಿ ಭಾರತವು ಅಮೆರಿಕವನ್ನು ಡಕ್‌ವರ್ತ್‌ಲೂಯಿಸ್ ವಿಧಾನದಲ್ಲಿ ೬ ವಿಕೆಟ್‌ಗಳಿಂದ ಮಣಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಅಮೆರಿಕ, ೩೫.೨ ಓವರ್‌ಗಳಲ್ಲಿ ೧೦೭ ರನ್‌ಗಳಿಗೆ ತನ್ನೆಲ್ಲಾ ವಿಕೆಟ್ ಕಳೆದು ಕೊಂಡಿತು, ಭಾರತದ ಹೆನಿಲ್ ಪಟೇಲ್ ಐದು ವಿಕೆಟ್‌ಗಳನ್ನು ಪಡೆದರು. ನಂತರ ಮಳೆಯಿಂದಾಗಿ ಪಂದ್ಯವನ್ನು ೩೭ ಓವರ್‌ಗಳಿಗೆ ಸೀಮಿತಗೊಳಿಸಿ, ಡಕ್‌ವರ್ತ್‌ಲೂಯಿಸ್ ನಿಯಮಾನುಸಾರ ಭಾರತಕ್ಕೆ ೯೬ ರನ್‌ಗಳ ಪರಿಷ್ಕೃತ ಗುರಿಯನ್ನು ನೀಡಲಾಯಿತು. ಈ ಗುರಿಯನ್ನು ೧೭.೨ ಓವರ್ ಗಳಲ್ಲಿ ತಲುಪಿದ ಭಾರತ ತಂಡ ಗೆಲುವು ತನ್ನದಾಗಿಸಿಕೊಂಡಿತು. ಹೆನಿಲ್ ಪಟೇಲ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ನಾಳೆ ಇದೇ ಕ್ರೀಡಾಂಗಣದಲ್ಲಿ ನಡೆಯುವ ಎ ಗುಂಪಿನ ಪಂದ್ಯದಲ್ಲಿ ಭಾರತ, ಬಾಂಗ್ಲಾದೇಶ ವಿರುದ್ಧ ತನ್ನ ಎರಡನೇ ಪಂದ್ಯವನ್ನು ಆಡಲಿದೆ.

*********

ನವದೆಹಲಿಯಲ್ಲಿಂದು ನಡೆಯಲಿರುವ ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಭಾರತದ ಖ್ಯಾತ ಶಟ್ಲರ್ ಲಕ್ಷ್ಯ ಸೇನ್,

ಚೇನಾದ ತೈಪೆಯ ಲಿನ್ ಚುನ್-ಯಿ ಅವರನ್ನು ಎದುರಿಸಲಿದ್ದಾರೆ. ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ೧೬ರ ಸುತ್ತಿನ ಪಂದ್ಯದಲ್ಲಿ ಲಕ್ಷ್ಯ ಸೇನ್ ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ೨೧-೧೯, ೨೧-೧೦ ನೇರ ಸೆಟ್‌ಗಳಿಂದ ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

*********